ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡಪ್ರಭ    ದಿನಾಂಕ : DATE : 27/7/2019

# ಸೋಮವಾರ ವಿಶ್ವಾಸಮತ: ಅಂದೇ ಬಜೆಟ್ ಅಂಗೀಕಾರ

ನೂತನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸೋಮವಾರ ಬಹುಮತ ಸಾಬೀತುಪಡಿಸುವುದಾಗಿ ಘೋಷಿಸಿದ್ದಾರೆ. ಇದೇ ವೇಳೆ, ಅಂದೇ ಧನವಿನಿಯೋಗ ಮಸೂದೆ ಅಂಗೀಕಾರಗೊಳಿಸುವುದಾಗಿ ಪ್ರಕಟಿಸಿದ್ದಾರೆ. ಇದು ಸುಲಲಿತವಾಗಿ ಆದಲ್ಲಿ ಸರ್ಕಾರಿ ವ್ಯವಸ್ಥೆ ದೊಡ್ಡ ಬಿಕ್ಕಟ್ಟಿನಿಂದ ಪಾರಾಗಲಿದೆ. ಏಕೆಂದರೆ, ಆ.1ರಿಂದ ಸರ್ಕಾರ ನಡೆಯಲು ಜು.31ರೊಳಗೆ ವಿತ್ತ ಮಸೂದೆ ಪಾಸಾಗಲೇಬೇಕಿದೆ.

# ಸಂಪುಟ ರಚನೆ ಬಹುಮತ ಸಾಬೀತು ಬಳಿಕ

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು, ಸಿಎಂ ಆಗಿ ಯಡಿಯೂರಪ್ಪ ಶಪಥ ಸ್ವೀಕರಿಸಿದ್ದಾರೆ. ಯಡಿಯೂರಪ್ಪ ಒಬ್ಬರೇ ಶಪಥ ಸ್ವೀಕರಿಸಿದ್ದು, ಸಚಿವರಾಗಿ ಯಾರೂ ಪದಗ್ರಹಣ ಮಾಡಿಲ್ಲ. ಅತೃಪ್ತ ಶಾಸಕರ ರಾಜೀನಾಮೆ-ಅನರ್ಹತೆ ವಿವಾದ ಇತ್ಯರ್ಥವಾಗದಿರುವುದು, ಈಗಾಗಲೇ ಸಚಿವ ಸ್ಥಾನಕ್ಕೆ ಲಾಬಿ ನಡೆದಿರುವ ಕಾರಣ ಆರಂಭದಲ್ಲೇ ಗೊಂದಲಗಳು ಆಗುವುದು ಬೇಡವೆಂಬ ಹಿನ್ನೆಲೆಯಲ್ಲಿ ಬಹುಮತ ಸಾಬೀತುಪಡಿಸಿದ ಬಳಿಕವಷ್ಟೇ ಸಂಪುಟ ರಚನೆಗೆ ಯಡಿಯೂರಪ್ಪ ನಿರ್ಧರಿಸಿದ್ದಾರೆ ಎನ್ನಲಾಗಿದೆ.